










ಆರ್ಕಿಡ್ ಹೂವು ಹೆಣ್ಣು ದುಂಬಿಯ ವಾಸನೆ ಮತ್ತು ವೆಲ್ವೆಟ್‌ನಂತಹ ಸ್ಪರ್ಶವನ್ನು ಅನುಕರಿಸುತ್ತವೆ. ಇದು ಜೀವಂತ ಕೀಟವನ್ನು ಹೋಲುತ್ತವೆ. ಇದರ ರೂಪವನ್ನು ಗಮನಿಸಿ ಹೆಣ್ಣು ದುಂಬಿ ಎಂದು ಭಾವಿಸಿದ ಗಂಡು ದುಂಬಿ ಹೂವನ್ನು ಕೂಡುತ್ತದೆ. ಆಗ ಪರಾಗಸ್ಪರ್ಶ ಕಾರ್ಯ ನಡೆಯುತ್ತದೆ. ಸಸ್ಯಗಳು ಗಾಳಿ, ನೀರಲ್ಲದೇ ಹಕ್ಕಿ, ಚಿಟ್ಟೆ, ಜೇನು ದುಂಬಿಗಳನ್ನು ಉಪಯೋಗಿಸಿಕೊಂಡು ವೈವಿಧ್ಯಮಯವಾಗಿ ಒಂದರ ಪರಾಗವನ್ನು ಬೇರೊಂದು ಹೂವಿಗೆ ಬೀರುವುದರಿಂದ ಹೂವುಗಳು ಗರ್ಭ ಕಟ್ಟಿ ತಾಯಿಯಾಗುತ್ತವೆ.

ಕಟೋನಿಯಾ ಪಿಡಂಕು ಲಾರಿಸ್ ಬ್ರಿಟಿಷರ ಆಡಳಿತ ಅವಧಿಯಲ್ಲಿ ಅಂದಿನ ಮದ್ರಾಸ್ ಪ್ರಾಂತ್ಯದ ಮೇಜರ್ ಜನರಲ್ ಆಗಿದ್ದ. ಕೊಟ್ಟಾನ್ ಕ್ಲಿಷ್ಟಕರವಾದ ಆರ್ಕಿಡ್ ಸಂಗ್ರಹಕಾರ ಮತ್ತು ಆರ್ಕಿಡ್ ಬೇಸಾಯಗಾರನಾಗಿದ್ದ. ಈ ಮೇಜರ್ ಜನರಲ್ ಹೊಸ ಆರ್ಕಿಡ್ ತಳಿಗಳನ್ನು ಅನ್ವೇಷಣೆ ಮಾಡಿದ್ದ. ಈಸ್ಟ್ ಇಂಡಿಯಾ ಕಂಪೆನಿಯ ವೈದ್ಯರಾಗಿ ಬಂದು ಭಾರತದ ಸಸ್ಯ ಸಂಗ್ರಹಣೆ ಮತ್ತು ಅವುಗಳ ದಾಖಲೆ ಮಾಡುವುದಕ್ಕಾಗಿ ತನ್ನ ಜೀವಿತವನ್ನೇ ಮುಡುಪಾಗಿಟ್ಟ ಡಾ.ರಾಬರ್ಟ್ ವೈಟ್, ಈ ದುಂಬಿ ಆರ್ಕಿಡ್‌ಗೆ ಕಟೋನಿಯಾ ಪಿಡಂಕು ಲಾರಿಸ್‌ನ ಹೆಸರನ್ನು ನಾಮಕರಣ ಮಾಡಿದ್ದಾರೆ.

ಕಟೋನಿಯಾ ಜಾತಿಯಲ್ಲಿ ಕಟೋನಿಯಾ ಪಿಡಂಕು ಲಾರಿಸ್ ಎಂಬ ಪ್ರಬೇಧ ದಕ್ಷಿಣ ಭಾರತದ ಮಲಬಾರ್ ಪ್ರದೇಶದಲ್ಲಿದೆ. ಹೌದು, ನಮ್ಮ ಉತ್ತರ ಕನ್ನಡದ ಕೈಗಾ ಕಾಡಿನಲ್ಲಿಯೂ ಸಾಕಷ್ಟಿವೆ. ಈ ಆರ್ಕಿಡ್ ಸಸ್ಯ ಮರದ ಮೇಲೆ ಬೆಳೆಯುವ ಒಂದು ಅಪ್ಪು ಸಸ್ಯ. ಇದರ ಪುಷ್ಪಮಂಜರಿ ಗಿಡದಿಂದ ಅನತಿ ದೂರದಲ್ಲಿ ಸಣ್ಣ ಕಡ್ಡಿಯ ತುದಿಗೆ ಹೂವಾಗುವುದರಿಂದ ಪಿಡಂಕು ಲಾರಿಸ್ ಎಂದು ನಾಮಕರಣ ಮಾಡಿದ್ದಾರೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಈ ಹೂವುಗಳನ್ನು ನೋಡಬಹುದು. ಎಲೆಗಳು ವರ್ಷವಿಡೀ ಇರುತ್ತವೆ.